ಸಿ.ಸಿ.1450-2017

ಪಿಡಬ್ಲು-೧

ದಿ:23-09-2025 ರಂದು ಫಿರ್ಯಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು</u>**: ಆರೋಪಿ ಪರ ಶ್ರೀಯುತ ಸಿ.ಕೆ.ಹೆಚ್. ವಕೀಲರಿಂದ.

ನಾನು ಎಸ್.ಎಸ್.ಎಲ್.ಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಸ್ವಲ್ಪ ಮಟ್ಟಿಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ನಾನು ಗೃಹಿಣಿ ಎಂದರೆ ಸರಿ. ನೀವು ಗೃಹಿಣಿ ಆಗಿರುವ ಮೇರೆಗೆ ಯಾವುದೇ ಪ್ರತ್ಯೇಕ ಆದಾಯ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಸೆಕೆಂಡ್ ಹ್ಯಾಂಡ್ ವುಡ್ ಬಿಸನೆಸ್ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಸೆಕೆಂಡ್ ಹ್ಯಾಂಡ್ ವುಡ್ ಬಿಸನೆಸ್ ಮಾಡಿಕೊಂಡಿರುತ್ತೇನೆ ಎನ್ನುವ ವಿಚಾರವನ್ನು ನನ್ನ ಫಿರ್ಯಾದ್ದು, ನೋಟಿಸ್ಸು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರು ಕೇಳಿರುವುದಿಲ್ಲ ಮತ್ತು ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಆರೋಪಿಯ ಮನೆ ಟೆಲಿಫೋನ್ ಎಕ್ಸಚೆಂಜ್ ಕಛೇರಿ ರಸ್ತೆಯಲ್ಲಿ ಇದ್ದವು ಎಂದರೆ ಸರಿ.

2. ಆರೋಪಿಯು ಮನೆಯಲ್ಲಿ ಮತ್ತು ಸ್ವಂತ ಮಾಳಿಗೆಯಲ್ಲಿ ಬಾಗಿಲು ಸ್ಕ್ರೀನ್ ಮತ್ತು ಫ್ಲೋರ್ ಮ್ಯಾಟ್ ವ್ಯಾಪಾರ ಮಾಡಿಕೊಂಡಿದ್ದರು ಎಂದರೆ ಸರಿ. ನಾನು ಆರೋಪಿ ಕಡೆಯಿಂದ ಹೋಲ್ ಸೇಲ್ ಬೆಲೆಯಲ್ಲಿ ಸ್ಕ್ರೀನ್ ಮತ್ತು ಫ್ಲೋರ್ ಮ್ಯಾಟುಗಳನ್ನು ಪಡೆದುಕೊಂಡು ಲಾಭಕ್ಕೆ ಮಾರಾಟ ಮಾಡಿ ಹೋಲ್ ಸೇಲ್ ಹಣವನ್ನು ಆರೋಪಿಗೆ ನೀಡುತ್ತಿದ್ದೆ ಎಂದರೆ ಸಾಕ್ಷಿಯು ರೀಟೆಲ್ ಬೆಲೆಯಲ್ಲಿಯೇ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸ್ಕ್ರೀನ್ ಮತ್ತು ಫ್ಲೋರ್ ಮ್ಯಾಟುಗಳನ್ನು ತೆಗೆದುಕೊಂಡು ಬರಲು ಆರೋಪಿ ಅಂಗಡಿಗೆ ಆಗಾಗ್ಗೆ ಹೋಗುತ್ತಿದೆ ಎಂದರೆ ಸಾಕ್ಷಿಯು 2-3 ಬಾರಿ ಮಾತ್ರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

3. ನನಗೆ ಆರೋಪಿಯು 3-4 ವರ್ಷಗಳಿಂದ ಪರಿಚಯ ಇರುತ್ತಾರೆ. ಆ ರೀತಿ ಆರೋಪಿಯು 2014 ನೇ ಸಾಲಿನಿಂದ ಪರಿಚಯ ಇರುತ್ತಾರೆ. ಆರೋಪಿಯು ತನ್ನ ಮನೆಯಲ್ಲಿ ಸ್ವ ಸಹಾಯ ಸಂಘವನ್ನು ನಡೆಸುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಹೋಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಆರೋಪಿ ನಡೆಸುತ್ತಿದ್ದ ಸಂಘದಿಂದ ಸಹಾಯ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನೀವು ನಿಪಿ.1 ಮತ್ತು 2 ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸುವ ಪೂರ್ವದಲ್ಲಿ ಸದರಿ ಚೆಕ್ಕುಗಳು ಯಾವ ಸಂಘದ ಖಾತೆಗೆ ಸಂಬಂಧಿಸಿದವು ಎಂದು ತಿಳಿದುಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಆರೋಪಿಗೆ ಚೆಕ್ಕು ಬೇಡ ಎಂದರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಮತ್ತು ನಾನು ಆರೋಪಿಗೆ ಯಾವುದೇ ಹಣ ನೀಡಿರುವುದಿಲ್ಲ ಹಾಗೂ ನಾನು ಆರೋಪಿಯ ಅಂಗಡಿಗೆ ಹೋಗಿ ಬರುತ್ತಿದ್ದ ಸಮಯದಲ್ಲಿ ಸಿಕ್ಕಿದ್ದ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಬ್ಯಾಂಕಿಗೆ ಹಾಜರುಪಡಿಸಿ ಅಮಾನ್ಯಗೊಳಿಸಿರುತ್ತೇನೆ ಎಂದರೆ ಸರಿಯಲ್ಲ.

4. ನಿಪಿ.1 ಚೆಕ್ಕು ಮರಿಯಮ್ ಸ್ವಸಹಾಯ ಸಂಘಕ್ಕೆ ಸಂಬಂಧಿಸಿದ ಚೆಕ್ಕಾಗಿರುತ್ತದೆ ಮತ್ತು ನಿಪಿ.2 ಚೆಕ್ಕು ಬೇಬಿ ಫಾತಿಮ ಸ್ವಸಹಾಯ ಸಂಘಕ್ಕೆ ಸಂಬಂಧಿಸಿದ ಚೆಕ್ಕಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ನಿಪಿ.1 ಮತ್ತು 2 ಚೆಕ್ಕಿನ ಸ್ವಸಹಾಯ ಸಂಘಗಳನ್ನು ಆರೋಪಿಗಳಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಚೆಕ್ಕುಗಳು ಸ್ವಸಹಾಯ ಸಂಘಕ್ಕೆ ಸೇರಿದ್ದವು ಎಂದು ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೇ ಒಂದು ಸಂಘಕ್ಕೆ ಸಂಬಂಧಿಸಿದ ಚೆಕ್ಕು ಬ್ಯಾಂಕಿನಲ್ಲಿ ಮಾನ್ಯಗೊಳಬೇಕಾದರೆ ಸದರಿ ಚೆಕ್ಕಿಗೆ ಸಂಘದ ಪ್ರತಿನಿಧಿ ೧ ಮತ್ತು 2 ರವರ

ಸಹಿಗಳು ಇರಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಯಾವುದೆ ಚೆಕ್ಕುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ಚೆಕ್ಕುಗಳನ್ನು ಆರೋಪಿಯು ತನ್ನ ವೈಯಕ್ತಿಕ ವ್ಯವಹಾರಗಳಿಗೆ ಬಳಿಸಿಕೊಳ್ಳಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣವನ್ನು ನನ್ನ ಮಗಳ ಕಡೆಯಿಂದ ಕೊಡಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.